ಭಾಷೆಯ ಚರಿತ್ರೆಯ ಬಗ್ಗೆ ಮಾತನಾಡುವಾಗ, ಮಾತಿಗಿಂತಲೂ ಬರಹಕ್ಕೆ ಹೆಚ್ಚಿನ ಒತ್ತು ನೀಡುತ್ತೇವೆ. ಆದರೆ, ಒಂದು ಭಾಷೆ ತನ್ನಲ್ಲಿ ರೂಪುಗೊಂಡ ಬರಹಕ್ಕಿಂತಲೂ ಬಹಳ ಹಿಂದಿನದಾಗಿರುತ್ತದೆ.

# ಯಾವುದು ಭಾಷೆ? ಮಾತೋ, ಬರಹವೋ?

■ ಡಿ.ಎನ್. ಶಂಕರ ಭಟ್

ಇವತ್ತು ಸಾಮಾನ್ಯ ಜನರಲ್ಲಿ ಮಾತ್ರವಲ್ಲದೆ, ದೊಡ್ಡ ದೊಡ್ಡ ವಿದ್ವಾಂಸರೆಂದು ಎನ್ನಿಸಿಕೊಂಡವರಲ್ಲೂ ಮಾತು ಮತ್ತು ಬರಹಗಳ ನಡುವಿನ ಸಂಬಂಧವನ್ನು ತಿಳಿಯುವಲ್ಲಿ ಮತ್ತು ಅವಕ್ಕೂ ಭಾಷೆಗೂ ನಡುವಿರುವ ಸಂಬಂಧವನ್ನು ತಿಳಿಯುವಲ್ಲಿ ಒಂದು ದೊಡ್ಡ ಗೊಂದಲವಿದೆ; ಈ ಗೊಂದಲದಿಂದಾಗಿ, ಭಾಷೆಗಳ ಕುರಿತಾಗಿ ಅವರಲ್ಲಿರುವ ಅನಿಸಿಕೆಗಳಲ್ಲೂ ಗೊಂದಲ ಕಾಣಿಸಿಕೊಳ್ಳುತ್ತಿದೆ.

ಭಾಷೆ ಎಂಬುದು ಮುಖ್ಯವಾಗಿ ಮಾತಲ್ಲದೆ ಬರಹವಲ್ಲ ಎಂಬುದನ್ನು ಅವರು ಗಮನಿಸುವುದೇ ಇಲ್ಲ. ಆದರೆ, ಈ ಹೇಳಿಕೆಯನ್ನು ಬೆಂಬಲಿಸಬಲ್ಲ ಹಲವು ವಿಷಯಗಳನ್ನು ಇಲ್ಲಿ ಕೊಡಬಹುದು:

ಮಾತು ತುಂಬಾ ಹಳೆಯದು, ಬರಹ ತೀರಾ ಇತ್ತೀಚೆಗಿನದು ಎಂಬುದು ಇವುಗಳಲ್ಲೊಂದು: ಮಾತು ಐದಾರು ಮಿಲಿಯ ವರ್ಷಗಳಷ್ಟು ಹಳೆಯದು. ಆದರೆ, ಬರಹ ಹೆಚ್ಚೆಂದರೆ ನಾಲ್ಕೈದು ಸಾವಿರ ವರ್ಷಗಳಷ್ಟು ಹಳೆಯದು. ಮೊನ್ನೆ ಮೊನ್ನೆವರೆಗೂ ಕೆಲವೇ ಕೆಲವು ಭಾಷೆಗಳು ಮಾತ್ರ ಬರಹವನ್ನು ಬಳಸುತ್ತಿದ್ದುವು ಮತ್ತು ಅಂತಹ ಭಾಷೆಗಳನ್ನು ಬಳಸುವ ಸಮಾಜಗಳಲ್ಲೂ ಕೆಲವೇ ಕೆಲವು ಮಂದಿ ಮಾತ್ರ ಬರಹವನ್ನು ಬಳಸಬಲ್ಲವರಾಗಿದ್ದರು. ಇವತ್ತಿಗೂ ಬರಹವನ್ನು ಬಳಸಲು ಬಾರದ ಜನರ ಎಣಿಕೆ ಸಾಕಷ್ಟು ದೊಡ್ಡದಾಗಿದೆ.

ಮಾತನ್ನು ಮಕ್ಕಳು ಸ್ವಾಭಾವಿಕವಾಗಿ ಮತ್ತು ತಮ್ಮ ಬೆಳವಣಿಗೆಯ ಅಂಗವಾಗಿ ಪಡೆಯುತ್ತಾರೆ; ಯಾವುದೇ ಒಂದು ಆರೋಗ್ಯವಂತ ಮಗುವೂ ಮಾತನ್ನು ಪಡೆಯದಿರುವುದಿಲ್ಲ; ಆದರೆ, ಬರಹವನ್ನು ಮಕ್ಕಳು ಇನ್ನೊಬ್ಬರ ನೆರವಿನಿಂದ ಕಲಿಯಬೇಕಾಗುತ್ತದೆ; ಆ ಕಲಿಕೆ ಅವರ ಬೆಳವಣಿಗೆಯ ಅಂಗವಲ್ಲ, ಮತ್ತು ಅದು ಅವರಿಗೆ ಸ್ವಾಭಾವಿಕವಾಗಿ ಬರುವುದೂ ಇಲ್ಲ.

ಮಾತು ತಾನಾಗಿಯೇ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ, ಮತ್ತು ಹಾಗೆ ಬದಲಾಗುವ ಮೂಲಕ ಅದು ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತದೆ. ಬರಹ ಆ ರೀತಿ ತಾನಾಗಿಯೇ ಬದಲಾಗುವುದಿಲ್ಲ; ಅದನ್ನು ಹಾಗೆಯೇ ಬಿಟ್ಟರೆ ಅದು ಕೃತಕವಾಗುತ್ತಾ ಹೋಗಿ, ಕೊನೆಗೆ ತನ್ನ ಜೀವಂತಿಕೆಯನ್ನೇ ಕಳೆದುಕೊಳ್ಳುತ್ತದೆ. ಮಾತಿಗೆ ಹೊಂದಿಕೊಳ್ಳುವ ಹಾಗೆ ಅದನ್ನು ಯಾರಾದರೂ ಬರಹಗಾರರು ಬದಲಾಯಿಸುತ್ತಿದ್ದಲ್ಲಿ ಮಾತ್ರ ಅದು ಜೀವಂತವಾಗಿ ಉಳಿಯಬಲ್ಲುದು.

ಇಂತಹ ಇನ್ನೂ ಹಲವು ವಿಷಯಗಳು ಭಾಷೆಯೆಂದರೆ ಮುಖ್ಯವಾಗಿ ಮಾತಲ್ಲದೆ ಬರಹವಲ್ಲ ಎಂಬುದನ್ನು ಬೆಂಬಲಿಸುತ್ತವೆ.

ಆದರೆ, ಹಲವರ ಮನಸ್ಸಿನಲ್ಲಿ ಇವತ್ತಿಗೂ ಮಾತಿಗಿಂತ ಬರಹವೇ ಮುಖ್ಯ ಮತ್ತು ಬರಹವೇ ಭಾಷೆ ಎಂಬ ತಪ್ಪನಿಸಿಕೆಯಿದೆ. ಮಾತು, ಬರಹ ಮತ್ತು ಭಾಷೆಗಳೆಂಬ ಈ ಮೂರು ಪದಗಳನ್ನು ಬಳಸುವಲ್ಲಿ ಸಾಮಾನ್ಯ ಜನರಲ್ಲಿ ಮಾತ್ರವಲ್ಲದೆ, ಹಲವು ಮಂದಿ ವಿದ್ವಾಂಸರೆಂದೆನ್ನಿಸಿಕೊಂಡವರಲ್ಲೂ ಇಂತಹದೊಂದು ಗೊಂದಲವಿದೆ ಎಂಬುದು ಕೆಳಗೆ ಕೊಟ್ಟಿರುವ ಕೆಲವು ಹೇಳಿಕೆಗಳನ್ನು ಪರಿಶೀಲಿಸಿದಲ್ಲಿ ಗೊತ್ತಾಗುತ್ತದೆ:

1. ಹೆಚ್ಚಿನವರು ಕನ್ನಡ ಒಂದು ಶಾಸ್ತ್ರೀಯ ಭಾಷೆ ಎನ್ನುತ್ತಾರೆ; ಆದರೆ, ನಿಜಕ್ಕೂ ಅವರು ಶಾಸ್ತ್ರೀಯ ಬರಹದ ಕುರಿತಾಗಿ ಮಾತನಾಡುತ್ತಿರುತ್ತಾರೆ. ಯಾಕೆಂದರೆ, ಒಂದು ಭಾಷೆಯನ್ನು ಶಾಸ್ತ್ರೀಯ ಎಂಬುದಾಗಿ



ರಾಣೆಬೆನ್ನೂರು ತಾಲ್ಲೂಕಿನ ಚನ್ನಾಪುರ ತಾಂಡಾದಲ್ಲಿರುವ ಟಿಪ್ಪು ಸುಲ್ತಾನರ ಕಾಲದ ಕನ್ನಡ ಶಾಸನ